**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 1711/2022**

ಚಾ.ಸಾ-1, ಪ್ರಾ.ಸಾ-1

| | | |
|---|---|---|
| ಹೆಸರು | : | ತಿರುಮಲೇಶ್ |
| ತಂದೆಯ ಹೆಸರು | : | ಲೇಟ್ ಮಾಧುಕೃಷ್ಣ ಜೆಟ್ಟಪ್ಪ |
| ವಯಸ್ಸು | : | 60 |
| ವೃತ್ತಿ | : | ನಿವೃತ್ತ ಪೊಲೀಸ್ ಉಪ ನಿರೀಕ್ಷಕರು |
| ವಾಸ | : | ಮೈಸೂರು |

**ದಿನಾಂಕ 08.05.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಜನವರಿ 2022 ರಿಂದ ಆಗಸ್ಟ್ 2023 ರವರಗೆ ತಿ. ನರಸೀಪುರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 19.01.2022 ರಂದು ರಾತ್ರಿ 11.00 ಗಂಟೆ ಸಮಯದಲ್ಲಿ ನಾನು ತಿ. ನರಸೀಪುರದ ಪೊಲೀಸ್ ನಿವಾಸದಲ್ಲಿ ವಿಶ್ರಾಂತಿಯಲ್ಲಿದ್ದಾಗ, ಬಾತ್ಮೀದಾರರಿಂದ ತಿ. ನರಸೀಪುರ ತಾಲ್ಲೂಕಿನ ಮೂಗೂರು ಗ್ರಾಮದ ಅಂಬೇಡ್ಕರ್ ಕಾಲೋನಿಯಲ್ಲಿ 1ನೇ ಆರೋಪಿತ ಮತ್ತು ಇತರರು ಮೂಗೂರು ಗ್ರಾಮ ದೇವತೆ ಹಬ್ಬದ ಸಂಬಂಧ ಹಸುವೊಂದನ್ನು ಖರೀದಿಸಿ ಮಾಂಸಕ್ಕಾಗಿ ಕತ್ತರಿಸಲು ಸಿದ್ದತ್ತೆ ಮಾಡುತ್ತಿದ್ದಾರೆ ಎಂದು ತಿಳಿದು ಬಂತು.

ನಂತರ ನಾನು, ಚಾಸಾ-2 ಮತ್ತು 3 ರವರನ್ನು ಇಲಾಖಾ ಜೀಪಿನಲ್ಲಿ ಕರೆದುಕೊಂಡು ಸದರಿ ಅಂಬೇಡ್ಕರ್ ಕಾಲೋನಿಯ ಚಂದ್ರಶೇಖರ್ ರವರ ಮನೆಯ

ಬಳಿ ಹೋಗಿದ್ದೆವು. ಆ ವೇಳೆಗೆ ಪೊಲೀಸ್ ವಾಹನ ಸಂಖ್ಯೆ 112 ರಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಚಾಸಾ-4 ಮತ್ತು 5 ರವರು ಕೂಡ ಅಲ್ಲಿಗೆ ಬಂದಿದ್ದರು.

ನಾವೆಲ್ಲರೂ ಸೇರಿ ಸ್ವಲ್ಪ ದೂರದಲ್ಲಿ ನಿಂತು ನೋಡುತ್ತಿದ್ದಾಗ, ಸುಮಾರು 8-10 ಜನರು ಹಸುವನ್ನು ಕತ್ತರಿಸಿದ್ದರು. ನಾವೆಲ್ಲರೂ ಸೇರಿ ಅಲ್ಲಿಗೆ ಹೋದಾಗ ಆ ಜನರಲ್ಲಿ ಒಬ್ಬರನ್ನು ಹೊರತುಪಡಿಸಿ ಎಲ್ಲರೂ ಓಡಿ ಹೋದರು. ಅವರಲ್ಲಿ ಒಬ್ಬರನ್ನು ನಾವು ಹಿಡಿದುಕೊಂಡಿದ್ದು, ಅವರ ಹೆಸರು ಮತ್ತು ವಿಳಾಸವನ್ನು ಕೇಳಲಾಗಿ ಪುಟ್ಟೇಶ್ ಬಿನ್ ಮಾದಯ್ಯ, ಮೂಗೂರು ನಿವಾಸಿ ಎಂದು ತಿಳಿಸಿದರು. ಅವರ ಮೂಲಕ ಓಡಿ ಹೋದ ವ್ಯಕ್ತಿಗಳು ಯಾರು ಎಂದು ಕೇಳಲಾಗಿ, ಅವರ ಹೆಸರುಗಳು ರೇವಣ್ಣ, ಸೋಮಣ್ಣ, ಜಮುನ, ದ್ವಾರಕೀಶ್ ಮತ್ತು ಸಿದ್ದ ಎಂದು ತಿಳಿದು ಬಂತು.

ಸದರಿ ಪುಟ್ಟೇಶ್ ರವರನ್ನು ವಿಚಾರಿಸಿದಾಗ ಆ ಹಸುವನ್ನು ಅವರು ಮತ್ತು ಈ ಮೇಲೆ ಹೇಳಿದ ಎಲ್ಲಾ ವ್ಯಕ್ತಿಗಳು ಸೇರಿ ಸಂತೆಯಿಂದ ಖರೀದಿಸಿದ್ದು, ಅದನ್ನು ಕತ್ತರಿಸಿ ಅದರ ಮಾಂಸವನ್ನು ಎಲ್ಲರೂ ಹಂಚಿಕೊಳ್ಳುವುದಾಗಿ ತೀರ್ಮಾನ ಮಾಡಿದ್ದರು ಎಂದು ತಿಳಿದು ಬಂತು.

ನಂತರ ಸದರಿ ಪುಟ್ಟೇಶ್‌ರವರನ್ನು ವಶಕ್ಕೆ ಪಡೆದುಕೊಂಡು ಠಾಣೆಗೆ ಕರೆತಂದು ಸ್ವ ವರದಿಯನ್ನು ಸಿದ್ದಪಡಿಸಿ, ಅದನ್ನು ಚಾಸಾ-11 ರವರಿಗೆ ನೀಡಿರುತ್ತೇನೆ. ಅದನ್ನು ಮತ್ತು ಅದರಲ್ಲಿರುವ ನನ್ನ ಸಹಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಪಿ.1 ಮತ್ತು 1(ಎ) ಎಂದು ಗುರುತಿಸಲಾಯಿತು.

ಸದರಿ ಪುಟ್ಟೇಶ್ ರವರನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ನ್ಯಾಯಾಲಯದಲ್ಲಿ 1 ರಿಂದ 4ನೇ ಆರೋಪಿತರ ಪೈಕಿ 1ನೇ ಆರೋಪಿತ ಸದರಿ ಪುಟ್ಟೇಶ್ ಆಗಿರುತ್ತಾರೆ.

ಕೃತ್ಯಕ್ಕೆ ಬಳಸಿದ್ದ ಮತ್ತು ಸ್ಥಳದಲ್ಲಿದ್ದ ಕತ್ತಿಯನ್ನು ಈಗ ನೋಡಿ ಗುರುತಿಸಿರುತ್ತೇನೆ. ಅದನ್ನು ಎಂಒ.1 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಶ್ರೀ ಎಂ.ಎಸ್. ವಕೀಲರಿಂದ ಆರೋಪಿತರ ಪರವಾಗಿ**

ಘಟನೆಯ ಕುರಿತು ಮಾಹಿತಿ ಬಂದ ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ಅಲ್ಲಿಂದ ಸಿಬ್ಬಂದಿಗಳನ್ನು ಕರೆದುಕೊಂಡು ಇಲಾಖಾ ಜೀಪಿನಲ್ಲಿ ಘಟನಾ ಸ್ಥಳಕ್ಕೆ ಹೋಗಿದ್ದೆನು. ನಾನು ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಠಾಣೆಯ ಚಲನವಲನ ಪುಸ್ತಕದಲ್ಲಿ ನಮೂದಿಸಿದ್ದೇನೆ.

ಘಟನೆಯ ದಿನ ಮೂಗೂರಿನಲ್ಲಿ ಶ್ರೀ ತ್ರಿಪುರ ಸುಂದರಿ ದೇವತೆಯ ಹಬ್ಬವಿತ್ತು. ಆ ಗ್ರಾಮವು ಹೋಬಳಿಯಾಗಿದ್ದು, ಅಲ್ಲಿ ಎಲ್ಲಾ ಸಮುದಾಯದ ಜನರು ವಾಸವಾಗಿದ್ದಾರೆ ಎಂದರೆ ಸರಿ. ಅಲ್ಲಿ ಹೆಚ್ಚು ಜನಸಂಖ್ಯೆ ಇದ್ದಾರೆ ಎಂದರೆ ಸರಿ. ಆ ಹಬ್ಬವನ್ನು ಆ ಗ್ರಾಮದ ಎಲ್ಲರೂ ಆಚರಣೆ ಮಾಡುತ್ತಾರೆ ಎಂದರೆ ಸರಿ. ಆ ಹಬ್ಬದ ಆಚರಣೆಗೆ ನಮ್ಮ ಪೊಲೀಸ್ ಠಾಣೆಯ ಅನುಮತಿಯನ್ನು ಗ್ರಾಮದವರು ಕೋರಿದ್ದರು. ಆ ಗ್ರಾಮದಲ್ಲಿ ಹೊರ ಪೊಲೀಸ್ ಠಾಣೆ ಇದೆ ಎಂದರೆ ಸರಿ.

ಘಟನೆಯ ಕುರಿತು ಬಾತ್ಮೀದಾರರಿಂದ ಮಾಹಿತಿ ಬರುವ ಪೂರ್ವದಲ್ಲಿ ಆ ಹೊರ ಪೊಲೀಸ್ ಠಾಣೆಯ ಪೊಲೀಸ್ ಸಿಬ್ಬಂದಿಗಳು ಘಟನೆಯ ಕುರಿತು ನನಗೆ ಮಾಹಿತಿ ನೀಡಿರಲಿಲ್ಲ.

ಘಟನೆಯ ದಿನ ಹಬ್ಬದ ಪ್ರಯುಕ್ತ ಹಸುಗಳನ್ನು ಬಲಿ ಕೊಟ್ಟ ಬಗ್ಗೆ ಮಾಹಿತಿ ಇತ್ತಾ ಎಂದರೆ ಯಾವುದೇ ಬಲಿ ಕೊಟ್ಟಿರಲಿಲ್ಲ. ಘಟನಾ ಸ್ಥಳದಲ್ಲಿ ಇದ್ದ ಜನರು ಕತ್ತಿ ಮತ್ತು ಆಯುಧಗಳನ್ನು ಹೊಂದಿದ್ದರು. ಆ ಆಯುಧಗಳು ಯಾವುವು ಎಂದು ದೂರಿನಲ್ಲಿ ನಮೂದಿಸಿಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ಸುಮಾರು 8-10 ಜನರು ಸ್ಥಳದಲ್ಲಿದ್ದರು ಎಂದು ಈಗ ಹೇಳಿದ್ದು, ಆದರೆ 6 ಜನರ ವಿರುದ್ಧ ಮಾತ್ರ ನಾನು ದೂರು ನೀಡಿದ್ದು, ನನ್ನ ದೂರು ಸೃಷ್ಟಿಸಲ್ಪಟ್ಟಿದೆ ಎಂದರೆ ಸರಿಯಲ್ಲ.

ಘಟನಾ ಸ್ಥಳದ ಅಕ್ಕಪಕ್ಕ ಆರೋಪಿತರ ಮನೆಗಳು ಇದ್ದವಾ ಎಂದರೆ, ಘಟನಾ ಸ್ಥಳದ ಸುತ್ತಾ ಮನೆಗಳಿದ್ದವು. ಘಟನೆಯ ನಂತರ ಸದರಿ ಚಂದ್ರಶೇಖರ್ ರವರ ಮನೆಗೆ ಹೋಗಿ ಘಟನೆಯ ಕುರಿತು ನಾನು ವಿಚಾರಿಸಿಲ್ಲ, ತನಿಖಾಧಿಕಾರಿ ವಿಚಾರಿಸಿರಬಹುದು.

ಘಟನಾ ಸ್ಥಳದಲ್ಲಿ ವಿದ್ಯುತ್ ಬೆಳಕಿನ ವ್ಯವಸ್ಥೆ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಹಸುವಿನ ಕಾಲುಗಳನ್ನು ಹಗ್ಗದಿಂದ ಕಟ್ಟಿರಲಿಲ್ಲ ಎಂದರೆ ಸರಿ. ಅದರ ಬಳಿ ಯಾವುದೇ ಆಯುಧಗಳು ಇರಲಿಲ್ಲ ಎಂದರೆ ಸರಿಯಲ್ಲ.

ಸಿಸಿ ಸಂಖ್ಯೆ 1711/2022

ನಾನು ಆರು ಜನರ ವಿರುದ್ಧ ದೂರು ನೀಡಿದ್ದು, ಸ್ಥಳದಿಂದ ಓಡಿ ಹೋದ ಇತರ ವ್ಯಕ್ತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ.

ಘಟನಾ ಸ್ಥಳದಲ್ಲಿ 1 ರಿಂದ 6ನೇ ಆರೋಪಿತರು ಇರಲಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿತ ದಲಿತ ಸಂಘರ್ಷ ಸಮಿತಿಯ ತಾಲ್ಲೂಕು ಸಂಚಾಲಕರಾಗಿದ್ದು, ಹಲವು ಅಕ್ರಮಗಳ ವಿರುದ್ಧ ಪ್ರತಿಭಟನೆ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರನ್ನು ಪೊಲೀಸ್ ಠಾಣೆಗೆ ಘಟನೆಯ ಕುರಿತು ಮಾಹಿತಿ ಪಡೆಯಲು ನಾನು ಕರೆಸಿದ್ದು, ಅವರ ವಿರುದ್ಧವೇ ನಾನು ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ.

ನಾವು ಘಟನಾ ಸ್ಥಳಕ್ಕೆ ಹೋದಾಗ ನಮ್ಮ ಬಳಿ ಮೋಬೈಲ್ ಫೋನ್‌ಗಳು ಇದ್ದವು ಎಂದರೆ ಸರಿ. ಅವುಗಳಿಂದ ಸ್ಥಳದಲ್ಲಿದ್ದ 8-10 ಜನರ ಭಾವಚಿತ್ರಗಳನ್ನು ಪಡೆದುಕೊಳ್ಳಲು ಪ್ರಯತ್ನಿಸಿಲ್ಲ.

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿರದೆ ಠಾಣೆಯಲ್ಲಿ ವರದಿಯನ್ನು ಸಿದ್ಧಪಡಿಸಿದ್ದೇನೆ ಎಂದರೆ ಸರಿಯಲ್ಲ. ಬೇರೆಯವರು ಹಸುವನ್ನು ಕತ್ತರಿಸಿದ್ದು, ಅದನ್ನು ಆರೋಪಿತರ ವಿರುದ್ಧ ಸುಳ್ಳಾಗಿ ಅಪಾಧಿಸಲಾಗಿದೆ ಎಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಘಟನೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)** **ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಓ ಹೇ ಕೇ ಸರಿ ಇದೆ** **ಪ್ರ.ದ.ನ್ಯಾದ., ತಿ.ನರಸೀಪುರ**